# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ: 08221-224311
08221-225551
E- mail: aeengd1@cescmysore.org

ರವರ ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ,
ಆರ್.ಪಿ.ರಸ್ತೆ, ನಂಜನಗೂಡು-571301.

ಸಂಖ್ಯೆ: ಸಕಾನಿಇಂ (ವಿ)/ಸಇಂ (ತಾ)/2017-18/ 811-815

ದಿನಾಂಕ: 4/8/2017

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ:22.07.2017 ರಂದು ನಂಜನಗೂಡು ಉಪವಿಭಾಗ-1 ರ ಕಛೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್ (ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

| | |
|---|---|
| 1. ಶ್ರೀ ಎನ್.ನರಸಿಂಹೇಗೌಡ | ಅಧೀಕ್ಷಕ ಇಂಜಿನಿಯರ್(ವಿ) |
| 2. ಶ್ರೀ ಎ.ಎ ಸುನೀಲ್ ಕುಮಾರ್ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 3. ಶ್ರೀ ಆನಂದ್.ಸಿ.ಎಸ್ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 4. ಶ್ರೀಮತಿ ಹೇಮ.ಬಿ | ಸಹಾಯಕ ಇಂಜಿನಿಯರ್(ತಾಂತ್ರಿಕ) |
| 5. ಶ್ರೀ ನಾಗೇಂದ್ರ ಮೇಸ್ತ | ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ |
| 6. ಶ್ರೀ ವೀರೇಶ್ | ಸಹಾಯಕ ಇಂಜಿನಿಯರ್ ತಾಂಡವಪುರ ಶಾಖೆ |
| 7. ಶ್ರೀ ಶಶಿಕಿರಣ್ | ಸಹಾಯಕ ಇಂಜಿನಿಯರ್ ಸಿಂದುವಳ್ಳಿಪುರ ಶಾಖೆ |
| 8. ಶ್ರೀ ರಂಗಸ್ವಾಮಿ | ಕಿರಿಯ ಇಂಜಿನಿಯರ್ ಸುತ್ತೂರು ಶಾಖೆ |
| 9. ಶ್ರೀಮತಿ ಲಕ್ಷ್ಮಿ | ಪ್ರಭಾರ ಸಹಾಯಕ ಲೆಕ್ಕಾಧಿಕಾರಿ |

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಗ್ರಾಹಕರು ಹಾಗೂ ಪತ್ರಿಕಾ ಪ್ರತಿನಿಧಿಗಳನ್ನು ಸ್ವಾಗತಿಸಿದರು ನಂತರ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಾದ ಶ್ರೀ ಸುನೀಲ್ ಕುಮಾರ್ ರವರು ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕೈಗೊಂಡ ಕ್ರಮಗಳ ಕುರಿತು ಅನುಪಾಲನ ವರದಿಯನ್ನು ಓದಿದರು ಹಾಗೂ ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕ್ರಮ ಕೈಗೊಂಡಿರುವ ಕುರಿತು ಶಾಖಾಧಿಕಾರಿಗಳು ಮತ್ತು ಗ್ರಾಹಕರೊಂದಿಗೆ ಚರ್ಚಿಸಲಾಯಿತು. ತದನಂತರ ಗ್ರಾಹಕರು ಹೊಸದಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ಅಹವಾಲುಗಳ ವಿವರಗಳು:

1. ಶ್ರೀ ಚಿನ್ನು ಕೃಷ್ಣ, ಗೋಳೂರು ರವರು,
   - ಹಗಲಿನಲ್ಲಿ ಬೀದಿ ದೀಪ ಉರಿಯುತ್ತಿರುತ್ತವೆ.
   - ಸಿಬ್ಬಂದಿಗಳು ಅನುಚಿತವಾಗಿ ವರ್ತಿಸುತ್ತಾರೆ.
   - ಸಿಬ್ಬಂದಿಗಳು ದೂರವಾಣಿ ಕರೆಗಳನ್ನು ಸರಿಯಾಗಿ ಸ್ವೀಕರಿಸುವುದಿಲ್ಲ.

ಎಂದು ದೂರು ನೀಡಿ ಸರಿಪಡಿಸಲು ಕೋರಿದರು.

2. ವಿದ್ಯಾಸಾಗರ್ ರೈತ ಸಂಘದ ಅಧ್ಯಕ್ಷರು ಚಿಕ್ಕಯನ ಛತ್ರ ಹೋಬಳಿ ರವರು, ತಾಂಡವಪುರದಲ್ಲಿ ವಿದ್ಯುತ್ ತಂತಿ ಹಾದುಹೋಗಿರುವ ಮಾರ್ಗದ ಕೆಳಗೆ ಜಾಲಿಮರ ಬೆಳೆದಿದೆ ಎಂದು ದೂರು ನೀಡಿ ಸರಿಪಡಿಸಲು ಕೋರಿದರು.

3. ಶ್ರೀ ಸೋಮಶೇಖರ್ ಕಬ್ಬು ಬೆಳೆಗಾರರ ಸಂಘದ ಮುಖಂಡರು, ನಂದಗುಂದಪುರ ರವರು,

- ಹರಿಜನ ಬೀದಿಯಲ್ಲಿ ಸೋಮಶೇಖರ್ ಪರಿವರ್ತಕ ಸ್ಥಳಾಂತರಿಸಬೇಕು.
- ನಂದಗುಂದಪುರದಲ್ಲಿ ಗರಿ ತೆಗೆಸಬೇಕು. ಗುಣಮಟ್ಟದ ವಿದ್ಯುತ್ ಸರಬರಾಜಾಗುತ್ತಿಲ್ಲ ಎಂದು ದೂರು ನೀಡಿ ಸರಿಪಡಿಸಲು ಕೋರಿದರು.
- ನಂದೀಶ್, ಮರಿಸ್ವಾಮಿ, ಸೋಮಶೇಖರ್ ರವರ ಪಂಪ್‌ಸೆಟ್ ನ ತಂತಿಗಳನ್ನು ಎಳೆದು ಕಟ್ಟಬೇಕು ಎಂದು ಕೋರಿದರು.

4. ಶ್ರೀ ಬಸವಣ್ಣ ಕಬ್ಬು ಬೆಳೆಗಾರರ ಜಿಲ್ಲಾ ಕಾರ್ಯದರ್ಶಿ ಸಿಂದುವಳ್ಳಿಪುರ ರವರು

- ನಂಜನಗೂಡು– ಸಿಂಧುವಳ್ಳಿ ರಸ್ತೆಯಲ್ಲಿ ವಿದ್ಯುತ್ ಕಂಬಗಳು ರಸ್ತೆಗೆ ತುಂಬ ಹತ್ತಿರದಲ್ಲಿವೆ.
- ಮಹದೇವಪ್ಪ ಕಡುವಿನಕಟ್ಟೆ ರವರ ತೋಟದ ಪಂಪಸೆಟ್ ಪರಿವರ್ತಕ ಮತ್ತು ಕಬ್ಬಿಣದ ಕಂಬಗಳನ್ನು ಸ್ಥಳಾಂತರಿಸಬೇಕು.

ಎಂದು ದೂರು ನೀಡಿ ಸರಿಪಡಿಸಲು ಕೋರಿದರು.

5. ಶ್ರೀ ಸತೀಶ್‌ರಾವ್ ಸಿಂಧುವಳ್ಳಿ ರವರು

- ವ್ಯವಸಾಯದ ಜಮೀನಿನಲ್ಲಿ ವಿದ್ಯುತ್ ಕಂಬ ಹಾಕುವಾಗ ಮತ್ತು ತಂತಿ ಎಳೆಯುವಾಗ, ಜಮೀನಿನ ಮಾಲೀಕರ ಗಮನಕ್ಕೆ ತರಬೇಕು.
- ಸಿಂಧುವಳ್ಳಿ ಗ್ರಾಮದಲ್ಲಿ ವೋಲ್ಟೇಜ್‌ನ ಏರಿಳಿತವಿದ್ದು ತೊಂದರೆಯಾಗುತ್ತಿದೆ.
- ಸಂಕೇಶ್ವರ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು.
- ಕಾಳಿಹುಂಡಿ ಸಿಂಧುವಳ್ಳಿ ಗ್ರಾಮದಲ್ಲಿ ಸರ್ವೆ ನಂ 231 ರ ವಿದ್ಯುತ್ ತಂತಿಗಳು ಕೆಳಮಟ್ಟದಲ್ಲಿವೆ.

ಎಂದು ದೂರು ನೀಡಿ ಸರಿಪಡಿಸಲು ಕೋರಿದರು.

6. ಶ್ರೀ ಮಾದಪ್ಪ ಸೂರಳ್ಳಿ ಗ್ರಾಮ ರವರು, ವಿದ್ಯುತ್ ಕಂಬ ಬದಲಿಸಲು ಕೋರಿದರು.

7. ಶ್ರೀ ಅರುಣ ವಿನಾಯಕನಗರ ಚಾಮಲಾಪುರಹುಂಡಿ ರವರು ತಮ್ಮ ಮನೆ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಗಳನ್ನು ಸ್ಥಳಾಂತರಿಸಲು ಕೋರಿದರು.

8. ಶ್ರೀ ಸುರೇಶ್ ದಲಿತ ಸಂಘರ್ಷ ಸಮಿತಿ ಮುಖಂಡರು ನಂಜನಗೂಡು ರವರು

- ಶಂಕರಪುರ ಬಡಾವಣೆ ಗೆ ವಿದ್ಯುತ್ ಕಾಮಗಾರಿ ಸಮರ್ಪಕವಾಗಿ ಆಗಿಲ್ಲ. ಈಗಾಗಲೇ ಪರಿವರ್ತಕ ಸುಟ್ಟುಹೋಗಿರುತ್ತದೆ ಇದನ್ನು ಸರಿಪಡಿಸಲು ಕೋರಿದರು.
- ಶಂಕರಪುರ ಬಡಾವಣೆಗೆ ಬೀದಿ ದೀಪದ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೋರಿದರು.
- ದೂರವಾಣಿ ಮತ್ತು ಕೇಬಲ್ ತಂತಿಗಳು ವಿದ್ಯುತ್ ಕಂಬದಿಂದ ಸಂಪರ್ಕಿಸಿದ್ದಾರೆ ಸುರಕ್ಷತಾ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿರುವ ಬಗ್ಗೆ ಮಾಹಿತಿ ಕೋರಿದರು.

9. ಶ್ರೀ ವಿಜಯ ಕುಮಾರ್ ಜನಸಂಗ್ರಾಮ ಪರಿಷತ್ ಹೋರಾಟಗಾರ ನಗರ್ಲೆ ರವರು

- ಸಿಬ್ಬಂದಿ ವರ್ಗದವರು ಸರಿಯಾದ ಸಮಯಕ್ಕೆ ಕಛೇರಿಗೆ ಬರುತ್ತಿಲ್ಲ.
- ಊರಲ್ಲಿ ವಿದ್ಯುತ್ ಸಮಸ್ಯೆಯಾದಾಗ ಸರಿಪಡಿಸಲು ಮಾರ್ಗದಾಳುಗಳ ಬದಲಾಗಿ ಗುತ್ತಿಗೆದಾರರನ್ನು ಕಳುಹಿಸುತ್ತಾರೆ.
- ಗುತ್ತಿಗೆದಾರರಿಗೆ ಜನಸಂಪರ್ಕ ಸಭೆಗೆ ಹಾಜರಾಗಲು ತಿಳಿಸಬೇಕು.

* ತಾತ್ಕಾಲಿಕ ಸಂಪರ್ಕ ತೆಗೆದುಕೊಂಡ ಗ್ರಾಹಕರಿಗೆ, 28 ದಿನಗಳ ನಂತರ ವಿದ್ಯುತ್ ಕಡಿತಗೊಳಿಸುವ ಮೊದಲು ಸೂಚನೆ ಕೊಡಬೇಕು ಮತ್ತು 2 ದಿನಗಳು ಗ್ರೇಸ್ ಪೀರಿಯಡ್ ನೀಡಬೇಕು.
* ವರುಣ ಕ್ಷೇತ್ರದ ರಸ್ತೆ ಅಗಲೀಕರಣ ಕಾಮಗಾರಿ ನಡೆದಾಗ ತೆರವುಗೊಳಿಸಿದ ಕಬ್ಬಿಣ ಕಂಬಗಳ ಬಗ್ಗೆ ಮಹಿತಿ ನೀಡಬೇಕು.
* ರೈತರಿಗೆ ಹಗಲಿನಲ್ಲಿ ಕೊಡುವ 4 ಗಂಟೆಗಳ 3 ವಿದ್ಯುತ್ ಸರಬರಾಜನ್ನು ಮಧ್ಯಾಹ್ನದ ಬದಲು ಬೆಳ್ಗಿಗೆ ಅಥವಾ ಸಂಜೆ ಕೊಡಬೇಕು.

* ರೈತರ ಪಂಪ್ ಸೆಟ್‌ಗೆ ವಿದ್ಯುತ್ ಸರಬರಾಜಾಗುವಾಗ ಹಠಾತ್ ನಿಲುಗಡೆಯಾದರೆ ಮೋಟಾರ್‌ಗಳು ಹಾಳಾಗುತ್ತದೆ. ವಿದ್ಯುತ್ ಸಂಪರ್ಕ ಕಡಿತಗೊಳಿಸುವಾಗ ಮಾಹಿತಿ ನೀಡಬೇಕು ಎಂದು ಕೋರಿದರು.

10. ಶ್ರೀ ಸಿದ್ದರಾಜು ನಂಜನಗೂಡು ರವರು ಆರ್.ಆರ್ ಸಂಖ್ಯೆ N1L8418 ರ ಭದ್ರತಾ ಠೇವಣಿ ಮರುಪಾವತಿಸಲು ಕೋರಿದರು.

ಅಧೀಕ್ಷಕ ಇಂಜಿನಿಯರ್ ಕಾರ್ಯ ಮತ್ತು ಪಾಲನಾ ವೃತ ರವರು ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ ಸಭೆಯಲ್ಲಿ ಗ್ರಾಹಕರು ಮಂಡಿಸಿರುವ ದೂರುಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ತುರ್ತಾಗಿ ಅಗತ್ಯ ಕ್ರಮ ಕೈಗೊಳುವುದಾಗಿ ತಿಳಿಸಿದರು ಹಾಗೂ ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಶಾಖಾಧಿಕಾರಿಗಳಿಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.ಸಹಾಯಕ ಕಾರ್ಯನಿರ್ವಹಕ ಇಂಜಿನಿಯರ್‌ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

4/8/17

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ-1
ಚಾ.ವಿ.ಸ.ನಿ.ನಿ, ನಂಜನಗೂಡು.

ಪ್ರತಿಯನ್ನು:
1) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನ ವೃತ್ತ, ಕುವೆಂಪುನಗರ ಮೈಸೂರು ರವರ ಅವಗಾಹನೆಗಾಗಿ
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ನಂಜನಗೂಡು ರವರ ಅವಗಾಹನೆಗಾಗಿ
3) ಸಂಬಂದ ಪಟ್ಟ ಶಾಖಾಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಮು.ಕಡತ